
# ಜ್ಞಾನಶಕ್ತಿ
## ಮಾಸ ಪತ್ರಿಕೆ
## JNANASHAKTHI



### ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

ಸಂಪುಟ - 13 Reg. No. : KARBIL / 2005 / 16123 ಅಕ್ಟೋಬರ್ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 10 ಪ್ರಕಟಣೆ : 7-10-2024

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ



ಮಹಾರಾಷ್ಟ್ರದ ಅಕೋಲಾ ನಿವಾಸಿ ಶ್ರೀಮತಿ ಪ್ರಭಾವತಿ ರಾವ್ ಸ್ಮರಣಾರ್ಥ ಅವರ ಪತಿ ಶ್ರೀ ರಾಮದಾಸ್ ರಾಮರಾವ್ ಪರೀಕ, ಪುತ್ರರಾದ ಶ್ರೀ ಅಮರೇಶ್ ರಾವ್ ಮತ್ತು ಶ್ರೀ ಅಖಿಲೇಶ್ ರಾವ್, ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 1,00,000/- (ರೂಪಾಯಿ ಒಂದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.




ದ. ಕ. ಶಾಂಕರ ತತ್ವಪ್ರಸಾರ ಅಭಿಯಾನದ ಮಂಗಳೂರು ನಗರ ಭಜನಾ ಸಂಚಾಲಕಿ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್‌ಕುಮಾರ್ ತನ್ನ 70ನೇ ವರ್ಷದ ಹುಟ್ಟುಹಬ್ಬವನ್ನು ಶೃಂಗೇರಿ ಭಜನೆ, ಕಲ್ಯಾಣವೃಷ್ಟಿ ಅಭಿಯಾನ, ಶ್ರೀ ಸತ್ಯನಾರಾಯಣ ಪೂಜೆ, ಶಂಕರ ಭಗವತ್ಪಾದರ ಮತ್ತು ಜಗದ್ಗುರುಗಳ ಪೂಜೆಯನ್ನು ಮಾಡಿ ಬಂಧು-ಬಾಂಧವರೊಂದಿಗೆ ಆಚರಿಸಿದರು.

ಸುರತ್ಕಲ್ ಶ್ರೀ ಗುರುದೇವತಾ ಭಜನಾ ಮಂಡಳಿ, ಶ್ರೀ ಶಾರದಾಂಬ ಭಜನಾ ಮಂಡಳಿ ಮಂಗಳೂರು, ವೇದಾಂತ ಭಾರತಿ, ಸಂಘನಿಕೇತನ, ಶ್ರೀ ನಾಗಬ್ರಹ್ಮ ಭಜನಾ ಮಂಡಳಿಯ ಸದಸ್ಯರು ಭಜನೆಯಲ್ಲಿ ಭಾಗವಹಿಸಿದ್ದರು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. **9-11-2024**ನೇ ಶನಿವಾರ ಸಂಜೆ ಗಂಟೆ **5-30**ಕ್ಕೆ

### ದೀಪಾವಳಿ ಆಚರಣೆಯನ್ನು

ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ವಿನೋದಾತ್ಮಕ ಆಟಗಳು, ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ವಿನಂತಿಸುತ್ತೇವೆ.

ಆ ದಿನದ ವೆಚ್ಚಗಳ ಬಗ್ಗೆ ಪ್ರಾಯೋಜಕರನ್ನು ಅಪೇಕ್ಷಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು

**ಬಹುಮಾನಗಳ ಪ್ರಾಯೋಜಕರು :** ~~~~~~~~~~~~~~~~~~~~~~~~~~~~

ಶ್ರೀಮತಿ ಪ್ರಭಾ ಪ್ರಭಾಕರ್ ರಾವ್ ಮತ್ತು ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಕೇದಗೆ

~~~~~~~~~~~~~~~~~~~~~~~~~~~~~~~~~~~~~~~~

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಅನಿಲ್ ಎನ್. ✆ : 9448815172 ಶ್ರೀಮತಿ ಕುಸುಮಾ ನವೀನ್ ಕುಮಾರ್ ✆ : 9480760904
ಶ್ರೀ ಸುರೇಶ್ ಕಡಬ ✆ : 9972760673 ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ✆ : 9739155359

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ತಾ. **20-10-2024**ನೇ ಆದಿತ್ಯವಾರ



### 'ನಾಡಹಬ್ಬ'ವನ್ನು
ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು.

### ಕಾರ್ಯಕ್ರಮಗಳು



ಬೆಳಗ್ಗೆ 7-30ರಿಂದ : ವಿವಿಧ ಪಾರಾಯಣಗಳು
ಬೆಳಗ್ಗೆ 8-30ರಿಂದ : ಉಪಾಹಾರ
ಬೆಳಗ್ಗೆ 9-00ರಿಂದ : ಲಲಿತಾ ಸಹಸ್ರನಾಮ ಪಾರಾಯಣ
10-00ರಿಂದ 11-30 : ಸುಗಮ ಸಂಗೀತ (ಜಾನಪದ ಗೀತೆ, ಭಾವಗೀತೆ) ಸ್ಪರ್ಧೆ
ವಿಭಾಗ 1 : 5 ವರ್ಷದಿಂದ 15 ವರ್ಷದ ವರೆಗೆ
ವಿಭಾಗ 2 : 16 ವರ್ಷದಿಂದ 50 ವರ್ಷದ ವರೆಗೆ
ವಿಭಾಗ 3 : 51ರಿಂದ ಮೇಲ್ಪಟ್ಟು



10-30ರಿಂದ 11-30 : ಚಿತ್ರ ಬಿಡಿಸುವ ಸ್ಪರ್ಧೆ
ವಿಭಾಗ 1 : 1ನೇ ತರಗತಿಯಿಂದ 5ನೇ ತರಗತಿ
ವಿಭಾಗ 2 : 6ನೇ ತರಗತಿಯಿಂದ 10ನೇ ತರಗತಿ
11-30ರಿಂದ 12-00 : ಹುಲಿ ಕುಣಿತ ಸ್ಪರ್ಧೆ
ವಿಭಾಗ 1 : 16 ವರ್ಷದಿಂದ ಕೆಳಗಿನ ಮಕ್ಕಳ ವಿಭಾಗ
ವಿಭಾಗ 2 : ಮಹಿಳಾ ವಿಭಾಗ
ವಿಭಾಗ 3 : ಪುರುಷರ ವಿಭಾಗ
12-00ರಿಂದ 1-00 : ಪ್ರತಿಭಾ ಪುರಸ್ಕಾರ
ದಿ| ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಾಯಿ ಇವರಿಂದ
ನಿರ್ವಹಣೆ : ಶ್ರೀ ಕೆ. ಸದಾಶಿವ ಶಾಸ್ತ್ರಿ
ಮಧ್ಯಾಹ್ನ 1-00ರಿಂದ : ಭೋಜನ
2-00ರಿಂದ : ಯಕ್ಷಗಾನ - **'ಏಕಾದಶಿ ದೇವೀ ಮಹಾತ್ಮೆ' - ಸ್ಯಮಂತಕಮಣಿ**
ನಿರ್ದೇಶನ : ಶ್ರೀ ಸಂಜಯ್ ಕುಮಾರ್ ಫಲಿಮಾರ್
ಸಂಜೆ 5-00ರಿಂದ : ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆ

ಬಹುಮಾನಗಳ ಪ್ರಾಯೋಜಕರು : ಡಾ| ಜಯಲಕ್ಷ್ಮೀ ರಾವ್

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಅನಿಲ್ ಎನ್. : 9448815172
ಶ್ರೀ ಸುರೇಶ್ ಕಡಬ : 9972760673
ಶ್ರೀಮತಿ ಪುಷ್ಪಾ ಶ್ರೀನಿವಾಸ್ : 9739155359
ಶ್ರೀಮತಿ ಕುಸುಮಾ ನವೀನ್ ಕುಮಾರ್ : 9480760904
~~~~~~~~~~~~~~~~~~~~~~~~~~~~~~~~~~~~~~~~

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು

• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ •ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು : •ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 : 9343361618 e-mail : jnanashakthisss@gmail.com





॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥

॥ ಶ್ರೀ ಗುರುಭ್ಯೋ ನಮಃ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಕೋಡಿಂಬಾಡಿ, ಪುತ್ತೂರು - 574 325, ದ. ಕ.**

ಮೊಬೈಲ್ : 9901247080 / 9902022410

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

**ಪ್ರಿಯ ಭಗವದ್ಭಕ್ತರೇ,**

**ಸ್ವಸ್ತಿ! ಶ್ರೀ ಕ್ರೋಧಿ ಸಂ॥ದ ಆಶ್ವೀಜ ಶುಕ್ಲ ಪ್ರತಿಪತ್ತಿನಿಂದ ದಶಮಿವರೆಗೆ ದಿನಾಂಕ 03-10-2024ರಿಂದ 12-10-2024ರ ವರೆಗೆ**

**ಶರನ್ನವರಾತ್ರ ಉತ್ಸವ ಹಾಗೂ ಶ್ರೀ ಚಂಡಿಕಾ ಹೋಮ**

**ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀ ಇವರ ಮಾರ್ಗದರ್ಶನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿರುವುದು.**


**ಭಕ್ತಾದಿಗಳಾದ ತಾವೆಲ್ಲರೂ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ತೀರ್ಥಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ -**

**ಯಂ. ನಾಗೇಶ ಶರ್ಮ**
ಅರ್ಚಕರು ಹಾಗೂ ಕಾರ್ಯದರ್ಶಿ

**ಟಿ. ಅಣ್ಣಪ್ಪಯ್ಯ ತೆಂಕಿಲ**
ಅಧ್ಯಕ್ಷರು, ಆಡಳಿತ ಸಮಿತಿ

**ಮತ್ತು ಆಡಳಿತ ಮಂಡಳಿ ಸರ್ವ ಸದಸ್ಯರು**


## ಅನಾರು ಸುಬ್ರಹ್ಮಣ್ಯ ರಾವ್ (ಸುಬ್ಬಣ್ಣ) – ವಿಧಿವಶ



ಶ್ರೀ ಅನಾರು ಸುಬ್ರಹ್ಮಣ್ಯ ರಾವ್ (73 ವರ್ಷ) ಇವರು ತಾರೀಕು 13–09–2024ನೇ ಶುಕ್ರವಾರ ದೈವಾಧೀನರಾಗಿರುವರು. ಅನಾರು ವೆಂಕಟ್ರಮಣ ಮತ್ತು ಶ್ರೀಮತಿ ಭವಾನಿ ಇವರ ನಾಲ್ಕನೇ ಪುತ್ರರಾಗಿ ಜನಿಸಿದ ಇವರು, ವಿದ್ಯಾಭ್ಯಾಸದ ಅನಂತರ ಸುಮಾರು 45 ವರ್ಷಗಳ ಕಾಲ ಮುಂಬೈನಲ್ಲಿ ಉದ್ಯೋಗದಲ್ಲಿದ್ದು ಅಲ್ಲಿಯೇ ನೆಲೆಸಿದ್ದರು. ತನ್ನ ನಗುಮುಖ ಮತ್ತು ಶಾಂತ ಸ್ವಭಾವದಿಂದ 'ಅನಾರು ಸುಬ್ಬಣ್ಣ' ಎಂದೇ ಸಮಾಜದಲ್ಲಿ ಒಡನಾಟ ಹೊಂದಿದ್ದರು. ಶ್ರೀಯುತರು ಕಳೆದ ಅಕ್ಟೋಬರ್‌ನಲ್ಲಿ ಮುಂಬೈಯಿಂದ ಮಂಗಳೂರಿಗೆ ಬಂದು ನೆಲೆಸಿದ್ದರು. ಅವರು ಶ್ರೀಮತಿ ಉದಯಕುಮಾರಿ (ಪತ್ನಿ) ಶ್ರೀಮತಿ ಸ್ಮಿತಾ ಪ್ರಮೋದ್ (ಪುತ್ರಿ), ಶ್ರೀ ಪ್ರಮೋದ್ (ಅಳಿಯ), ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಗಲಿದ ಆತ್ಮಕ್ಕೆ ಭಗವಂತ ಸದ್ಗತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇವೆ.

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

## ಇದರ 87ನೇ ಮಹಾಸಭೆ



ಮಂಗಳೂರಿನ ಬಿಜೈಯಲ್ಲಿ ಪ್ರಧಾನ ಕಚೇರಿ ಹೊಂದಿರುವ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.) ಇದರ 2023–24ನೇ ಸಾಲಿನ 87ನೇ ಮಹಾಸಭೆಯು ಸೆಪ್ಟಂಬರ್ 15ರಂದು ಸಂಘದ ಅಧ್ಯಕ್ಷ ಶ್ರೀ ಕರುಣ್ ರಾವ್ ಬೆಳ್ಳೆ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಭವನ'ದಲ್ಲಿ ಜರುಗಿತು.

ಸಂಘದ 2023–24ನೇ ಸಾಲಿನ ವಾರ್ಷಿಕ ವರದಿ ಲೆಕ್ಕಪತ್ರವನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಾಯಿಪ್ರಸಾದ್ ಎಂ. ಸಭೆಯಲ್ಲಿ ಮಂಡಿಸಿದರು. ಸಂಘದ ಅಧ್ಯಕ್ಷ ಶ್ರೀ ಕರುಣ್ ರಾವ್ ಬೆಳ್ಳೆ ಮಾತನಾಡಿ, ಸಂಘವು ಪ್ರಸ್ತುತ ಅವಿಭಜಿತ ದ.ಕ. ಹಾಗೂ ಉಡುಪಿ ಜಿಲ್ಲೆಯಲ್ಲಿ ಒಟ್ಟು 14 ಶಾಖೆಗಳನ್ನು ಹೊಂದಿದ್ದು, 2024–25ನೇ ಸಾಲಿನಲ್ಲಿ ಸಂಘದ ಕಾರ್ಯವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಹೊಸ ಶಾಖೆಗಳನ್ನು ತೆರೆದು ವಿವಿಧ ಯೋಜನೆಗಳ ಮೂಲಕ ಸದಸ್ಯರಿಂದ 2023–24ನೇ ಸಾಲಿನಲ್ಲಿ ರೂ. 144.64 ಕೋಟಿ ಠೇವಣಿ ಸಂಗ್ರಹವಾಗಿ ರೂ. 132.71 ಕೋಟಿ ಸಾಲ ನೀಡಲಾಗಿದೆ. ಸಂಘವು ಒಟ್ಟು ರೂ. 277.35 ಕೋಟಿ ವ್ಯವಹಾರ ನಡೆಸಿ, ರೂ. 123.04 ಲಕ್ಷ ನಿವ್ವಳ ಲಾಭ ದಾಖಲಿಸಿದೆ. ಸಂಘದ ಸದಸ್ಯರಿಗೆ ಶೇ. 10 ಡಿವಿಡೆಂಡ್ ಘೋಷಿಸಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕುಂದಾಪುರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಪದೋನ್ನತಿ ಹೊಂದಿದ ಸಂಘದ ಗೌರವಾನ್ವಿತ ಸದಸ್ಯರಾದ ಶ್ರೀಮತಿ ಸುಕನ್ಯ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸದಸ್ಯರು ಸಲಹೆ–ಸೂಚನೆ ನೀಡಿದರು. ಉಪಾಧ್ಯಕ್ಷರಾದ ಶ್ರೀ ಎನ್. ಎಸ್. ನಟರಾಜ, ಆಡಳಿತ ಮಂಡಳಿಯ ನಿರ್ದೇಶಕರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಶ್ರೀಮತಿ ಪುಣ್ಯಶ್ರೀ ಮತ್ತು ತಂಡದವರು ಪ್ರಾರ್ಥಿಸಿದರು. ಸಂಘದ ನಿರ್ದೇಶಕರಾದ ಶ್ರೀ ಟಿ. ಬಿ. ಮೋಹನ್ ರಾವ್ ವಂದಿಸಿದರು. ವ್ಯವಸ್ಥಾಪಕರಾದ ಶ್ರೀ ಸಂದೀಪ್ ಕುಮಾರ್ ನಿರೂಪಿಸಿದರು.


NAVADURGA FINANCIALS
Estd 1998

SCAN ME TO KNOW MORE!!!



ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**

**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**

**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**



**PRAVEEN KUMAR ADYAPADY**

**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

# ಶ್ರೀಮತಿ ಸವಿತಾ ಎರ್ಮಾಳ್‌ಗೆ 'ಜಿಲ್ಲಾ ಸಾಧಕವಿಪ್ರ ಮಹಿಳೆ ಪ್ರಶಸ್ತಿ'



ಉಡುಪಿ ಜಿಲ್ಲಾ ವಿಪ್ರ ಮಹಿಳಾ ಸಮಾವೇಶದಲ್ಲಿ **ಶ್ರೀಮತಿ ಸವಿತಾ ಎರ್ಮಾಳ್** ಇವರಿಗೆ 'ಜಿಲ್ಲಾ ಸಾಧಕವಿಪ್ರ ಮಹಿಳೆ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ದಿನಾಂಕ 01–09–2024ನೇ ರವಿವಾರ ನೀಲಾವರದ 'ಗಂಗಾವಿಶ್ವೇಶ್ವರ ಸಭಾಭವನ'ದಲ್ಲಿ ಆಯೋಜಿಸಲಾದ ತೃತೀಯ ಜಿಲ್ಲಾ ವಿಪ್ರ ಮಹಿಳಾ ಸಮಾವೇಶದಲ್ಲಿ ಸುಮಾರು ಹನ್ನೆರಡು ಜನ ಸಾಧಕರನ್ನು ಗುರುತಿಸಿ, ಗೌರವಿಸಿ ಸನ್ಮಾನಿಸಲಾಯಿತು.

ಶ್ರೀಮತಿ ಸವಿತಾ ಎರ್ಮಾಳ್ ಇವರು ಸರಕಾರಿ ಪದವಿಪೂರ್ವ ಕಾಲೇಜು, ಬ್ರಹ್ಮಾವರದಲ್ಲಿ ಆಂಗ್ಲಭಾಷಾ ಉಪನ್ಯಾಸಕಿ ಮತ್ತು ರಾಷ್ಟ್ರೀಯ ಸೇವಾಯೋಜನಾಕೋಶದ ಮಂಗಳೂರು ವಿಭಾಗದ ವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉಡುಪಿ ಜಿಲ್ಲಾ 'ಬೇಟಿ ಬಚಾವೊ – ಬೇಟಿ ಪಡಾವೊ' ಅಭಿಯಾನದ ಕಾರ್ಯಕ್ರಮಗಳ ರಾಯಭಾರಿಯಾಗಿ ಮಾನ್ಯ ಉಡುಪಿ ಜಿಲ್ಲಾಧಿಕಾರಿಗಳು ಇವರನ್ನು ಆಯ್ಕೆ ಮಾಡಿರುವರು. ಇವರು ಶ್ರೀ ಶಾಂಕರತತ್ವ ಪ್ರಸಾರ ಅಭಿಯಾನ ಸಮಿತಿಯ ಉಡುಪಿ ಜಿಲ್ಲಾ ಸಹ ಸಂಚಾಲಕರಾಗಿ ಉಡುಪಿ ಜಿಲ್ಲೆಯಾದ್ಯಂತ ಶಂಕರ ಜಯಂತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಇವರಿಗೆ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಪುರಸ್ಕಾರಗಳು ಲಭಿಸಿದ್ದು ಅವುಗಳಲ್ಲಿ ಅತ್ಯುತ್ತಮ ಕಾರ್ಯಕ್ರಮಾಧಿಕಾರಿ ರಾಜ್ಯಪ್ರಶಸ್ತಿ, ಕೇಂದ್ರ ಯುವನಾಯಕತ್ವ ಪ್ರಶಸ್ತಿ, ಅತ್ಯುತ್ತಮ ಉಪನ್ಯಾಸಕಿ ರಾಜ್ಯಪ್ರಶಸ್ತಿ ಇವು ಪ್ರಮುಖವಾದವು. ಉತ್ತಮ ಸಂಪನ್ಮೂಲ ವ್ಯಕ್ತಿಯಾಗಿ 'ಜೀವನ ಕೌಶಲ್ಯ', 'ನಮ್ಮ ಸೇನೆ ನಮ್ಮ ಹೆಮ್ಮೆ', 'ಹೆಣ್ಣು ಮಕ್ಕಳನ್ನು ಉಳಿಸಿ ಮತ್ತು ಹೆಣ್ಣು ಮಕ್ಕಳನ್ನು ಬೆಳೆಸಿ' ಮುಂತಾದ ನೂರಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

# ಶುಭ ಹಾರೈಕೆಗಳು



ಕಲರ್ಸ್ ಕನ್ನಡದಲ್ಲಿ ಸಂಜೆ ಗಂಟೆ 7–30ಕ್ಕೆ ಪ್ರಸಾರವಾಗುತ್ತಿರುವ **'ಲಕ್ಷ್ಮೀ ಬಾರಮ್ಮ'** ಧಾರಾವಾಹಿಯ ಕೀರ್ತಿ ಪಾತ್ರಧಾರಿ **ತನ್ವಿ ರಾವ್ ಕದ್ರಿ** ಇವರಿಗೆ 2023–24ನೇ ಸಾಲಿನ ಕಲರ್ಸ್ ಕನ್ನಡದ 'ಅನುಬಂಧ' ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಜನಮೆಚ್ಚಿದ ಸ್ಟೈಲ್ ಐಕಾನ್ ಅವಾರ್ಡ್ ಲಭಿಸಿರುತ್ತದೆ.

2024–25ನೇ ಸಾಲಿನ ಸ್ಟೈಲ್ ಐಕಾನ್ ಪ್ರಶಸ್ತಿಗೆ 12 ಜನ ಪ್ರತಿಸ್ಪರ್ಧಿಗಳಲ್ಲಿ ಒಬ್ಬರಾಗಿ ನಾಮನಿರ್ದೇಶನಗೊಂಡಿದ್ದ ಇವರಿಗೆ ಹಾಗೂ ಇವರ ಪ್ರತಿಭೆಗೆ ಈ ಬಾರಿಯೂ ಪ್ರಶಸ್ತಿ ಲಭಿಸಿದೆ. ಇವರ ಮುಂದಿನ ಭವಿಷ್ಯವು ಇನ್ನೂ ಉಜ್ವಲವಾಗಲಿ ಎಂದು ಕದ್ರಿ ಶ್ರೀ ಮಂಜುನಾಥ ದೇವರಲ್ಲಿ ನಮ್ಮ ಹಾರೈಕೆ.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

*Manish Rao U.*
Tel : (O) 2223301
Mobile : 9448726499 / 8884284939

**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003
✆ : 9880968032 / 0824-2982095

**ಶಾಖೆಗಳು**


ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | |
|---|---|
| 45 ದಿನಗಳಿಂದ 180 ದಿನಗಳ ವರೆಗೆ | - 5% |
| 181 ದಿನಗಳಿಂದ 364 ದಿನಗಳ ವರೆಗೆ | - 6% |
| 1 ವರ್ಷದಿಂದ 3 ವರ್ಷದ ವರೆಗೆ | - 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**
ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು
ವಿಶೇಷ ಬಡ್ಡಿದರ : **9.6%**



Prop. : SUDHAKAR BELLE
✆ : 9845193103/ 9481563103
**KARAN DIGITAL STUDIO**
Sadasukh Building, Nr. Postoffice, Padubidri - 574 111
Opp. Busstand Belman
All Marriage & Other functions Photography & Videography Available

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಅಷ್ಟಮಿ ಆಚರಣೆ'



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾರೀಕು 15–9–2024ನೇ ರವಿವಾರ 'ಅಷ್ಟಮಿ ಆಚರಣೆ' ನಡೆಯಿತು. ಶಾಂಕರ ತತ್ವ ಅಭಿಯಾನದ ವತಿಯಿಂದ ಗುರುಸಪರ್ಯಾದ ಬಳಿಕ ರೋಟರಿ ಮಂಗಳೂರು ಹಿಲ್‌ಸೈಡ್ ವತಿಯಿಂದ ಉಚಿತ ನೇತ್ರ ಮತ್ತು ದಂತ ತಪಾಸಣೆ ಹಾಗೂ ರಕ್ತದಾನ ಶಿಬಿರದ ಉದ್ಘಾಟನೆ, ರೋಟರಿ ಅಧ್ಯಕ್ಷ ಶ್ರೀ ಮನೀಷ್ ರಾವ್ ಯು. ಇವರ ನೇತೃತ್ವದಲ್ಲಿ, ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಇತರ ಗಣ್ಯರ ಉಪಸ್ಥಿತಿಯಲ್ಲಿ ಮೇಲಿನ ಸಭಾಂಗಣದಲ್ಲಿ ನಡೆಯಿತು. ಮುಂದೆ ಭಗವದ್ಗೀತೆ ಪಠಣ, ಮುದ್ದುಕೃಷ್ಣ, ಭಕ್ತಿಗೀತೆ, ಮಡಕೆ ಒಡೆಯುವ, ಚಕ್ಕುಲಿ ಸಂಖ್ಯೆ ಊಹನೆ, ಶಂಖ ಊದುವ ಸ್ಪರ್ಧೆ ವಿವಿಧ ವಿಭಾಗದಲ್ಲಿ ನಡೆಯಿತು. ತೀರ್ಪುಗಾರರಾಗಿ ಶ್ರೀ ಸಂಜಯ್ ಕುಮಾರ್ ಪಿ., ಶ್ರೀಮತಿ ಶ್ರೀಲತಾ ಜಯಪ್ರಕಾಶ್, ಶ್ರೀಮತಿ ಮಂಜುಳಾ ಮುರಳೀಧರ್, ಶ್ರೀಮತಿ ಸುಜಾತಾ ಬೆಳ್ಳೆ, ಶ್ರೀ ಅನಿಲ್ ಎನ್. ಸಹಕರಿಸಿದರು. ಭೋಜನ ಬಳಿಕ ಪ್ರಾರ್ಥನೆಯನ್ನು ಶ್ರೀಮತಿ ಸುಜಾತಾ ರಾವ್ ಮತ್ತು ಶ್ರೀಮತಿ ಶ್ರೀಲತಾ ಭಟ್ ಹಾಡಿದರೆ ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸಂಜಯ್ ಕುಮಾರ್ ಪಿ. ನಡೆಸಿಕೊಟ್ಟರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕು। ವಂದನಾರಾಣಿ, ಕು। ಶರಣ್ಯ, ಶ್ರೀಮತಿ ರಮ್ಯಾ, ಶ್ರೀಮತಿ ರೂಪಲಕ್ಷ್ಮೀ, ಕು। ಆಕಾಂಕ್ಷ, ಕು। ಮನಸ್ವೀ ವೈಯಕ್ತಿಕ ನೃತ್ಯ ಪ್ರದರ್ಶನ ಮತ್ತು ಮಾ। ಅಭಿನವ ಉಪಾಧ್ಯಾಯನ ವಯೋಲಿನ್ ವಾದನ ನಡೆದವು. ಶ್ರೀಮತಿ ಅನುರಾಧ ಕಿಶೋರ್ ನಿರ್ದೇಶನದ ಎರಡು ತಂಡದ ಕಲಾವಿದೆಯರ ನೃತ್ಯ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ ರಘುವೀರ್ ಪೆರ್ಡೂರ್ ಉತ್ತಮ ಛಾಯಚಿತ್ರಗಳನ್ನು ಒದಗಿಸಿದರು. ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸಭಾ ಉಪಾಧ್ಯಕ್ಷರುಗಳಾದ ಶ್ರೀಮತಿ ಸುಮಂಗಲಾ ಪ್ರಭಾಕರ್, ಡಾ। ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣಾ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ ವ್ಯವಸ್ಥೆಯಲ್ಲಿ ಸಹಕರಿಸಿದರೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನಗಳನ್ನು ಶ್ರೀಮತಿ ಸೌಭದ್ರಾ ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ರತ್ನಾ ರಾಜೇಂದ್ರ ಪ್ರಾಯೋಜಿಸಿದರು. ಯುವ ವೇದಿಕೆ ಉಪಾಧ್ಯಕ್ಷ ಶ್ರೀ ಸುರೇಶ್ ಕಡಬರವರ ಧನ್ಯವಾದ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಸ್ಪರ್ಧಾ ವಿಜೇತರು : ಶ್ರೀ ಸುಬ್ರಹ್ಮಣ್ಯ ಸಭಾ 'ಅಷ್ಟಮಿ ಆಚರಣೆ' ಸ್ಪರ್ಧಾ ವಿಜೇತರು : ಭಗವದ್ಗೀತೆ ಕಂಠ ಪಾಠ – 10 ವರ್ಷ ಒಳಗಿನ ವಿಭಾಗ :** I - ಸಮೃದ್ಧಿ ಶಾನುಭಾಗ್, II – ಧನ್ವಿತಾ ಶಾನುಭಾಗ್; **10ರಿಂದ 18 ವರ್ಷದೊಳಗಿನ ವಿಭಾಗ :** I - ಗೌರೀಶ; **18 ವರ್ಷಕ್ಕಿಂತ ಮೇಲಿನ ವಿಭಾಗ :** I - ಸೌರಭ ರಾವ್ ಮತ್ತು ಸೌಂದರ್ಯಲಕ್ಷ್ಮಿ II - ಪುಷ್ಪಾ ಶ್ರೀನಿವಾಸ್ III - ವಸುಂಧರಾ ಶಾನುಭಾಗ್; **ಮುದ್ದು ಕೃಷ್ಣ ವೇಷ ಸ್ಪರ್ಧೆ : 8ರಿಂದ 12 ವರ್ಷದ ವಿಭಾಗ :** I - ಅಂಕಿತಶ್ರೀ ಮತ್ತು ಆಧ್ಯಾ II - ಆಧೀಶ; **3ರಿಂದ 8 ವರ್ಷ :** I - ಸಮೃದ್ಧಿ ಶಾನುಭಾಗ್, II - ಧನ್ವಿತಾ ಶಾನುಭಾಗ್ ಮತ್ತು ವಿವಾನ್ ರಾವ್ III - ಅಯಾನ್ ಮತ್ತು ಅನ್ನಪೂರ್ಣ; **3 ವರ್ಷದ ಒಳಗಿನ ವಿಭಾಗ :** I - ಧನಿಶಾ ಜಿ. ರಾವ್ II - ಸೋಮ ಸ್ಕಂದ III - ಆಧ್ಯಲಕ್ಷ್ಮೀ ಮತ್ತು ಅಚಿಂತ್ಯಾ ರಾವ್; **ಭಕ್ತಿಗೀತೆ ಸ್ಪರ್ಧೆ : 12ರಿಂದ 30 ವರ್ಷದ ವಿಭಾಗ :** I - ಶುಶಾಂತ II - ಅಂಕಿತಾಶ್ರೀ; **30 ವರ್ಷಕ್ಕಿಂತ ಮೇಲಿನ ವಿಭಾಗ :** I - ಶಕುಂತಲಾ ರಾವ್ II - ಸುಜಾತಾ ರಾವ್ III - ಉಷಾ ನಟರಾಜ್; **ಮಡಕೆ ಒಡೆಯುವ ಸ್ಪರ್ಧೆ : 16 ವರ್ಷದ ಒಳಗಿನ ವಿಭಾಗ :** ಅಭಿನವ ಪಿ.; **ಪುರುಷರ ವಿಭಾಗ :** ಪ್ರವೀಣ್ ಆದ್ಯಪಾಡಿ; **ಮಹಿಳಾ ವಿಭಾಗ :** ವಸುಂಧರಾ ಶಾನುಭಾಗ್; **ಚಕ್ಕುಲಿ ಸಂಖ್ಯೆ ಊಹನೆ :** ಶ್ರೀಮತಿ ಸ್ನೇಹಲತಾ ದಿವಾಕರ್; **ಶಂಖ ಊದುವ ಸ್ಪರ್ಧೆ :** 16 ವರ್ಷದ ಒಳಗಿನ ವಿಭಾಗ : I - ಅಲೋಕ ರಾವ್ II - ಅದೀಶ ಆದ್ಯಪಾಡಿ; **16 ವರ್ಷ ಮೇಲಿನ ವಿಭಾಗ :** I - ರೇಖಾ ರಾವ್ II - ಸದಾಶಿವ ಶಾಸ್ತ್ರಿ.



### ಶ್ರೀ ಸುಬ್ರಹ್ಮಣ್ಯ ಸಭಾ 'ಅಷ್ಟಮಿ ಆಚರಣೆ' ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ನೀಡಿದ ತಂಡಗಳು

**ಒಂದನೇ ತಂಡ :** 1. ಜ್ಯೋತಿ ಶ್ಯಾಂ ಪ್ರಸಾದ್ 2. ಮಮತಾ ವೇಣುಗೋಪಾಲ್ 3. ಸೌಮ್ಯ ರಾಮ್ ಪ್ರಸಾದ್ 4. ಶುಭ ಕಿರಣ 5. ಚೇತನಾ 6. ಅಪೇಕ್ಷ ಹರ್ಷದ್ 7. ಸ್ವಾತಿ ಕೇದಾರನಾಥ 8. ಚೈತ್ರ ಸುನೀಲ್.

**ಎರಡನೇ ತಂಡ :** 1. ಕುಸುಮಾ ನವೀನ್ 2. ಪುಷ್ಪಾವತಿ ಶ್ರೀನಿವಾಸ್ 3. ರತ್ನಾ ರಾಜೇಂದ್ರ 4. ಸರೋಜ ರಾವ್ 5. ಪ್ರೇಮಲತಾ 6. ರಘುವೀರ್ ರಾವ್ 7. ಶ್ರೀಕಾಂತ್ ರಾವ್

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


# ಅಮೇರಿಕಾದ ಸ್ಥಾನಿಕ ಮಧ್ಯ ಅಮೇರಿಕಾದಿಂದ ನಡೆಸಿಕೊಂಡು ಬಂದಿರುವ ವಾರ್ಷಿಕ ಸಮಾವೇಶ



ಕಳೆದ ಎರಡು ವರುಷಗಳಿಂದ ಅಮೇರಿಕಾದ ಸ್ಥಾನಿಕ ಮಧ್ಯ ಅಮೇರಿಕಾದಿಂದ ನಡೆಸಿಕೊಂಡು ಬಂದಿರುವ ವಾರ್ಷಿಕ ಸಮಾವೇಶ ಈ ಬಾರಿ ಡೆಟ್ರಾಯಿಟ್, ಮಿಚಿಗನ್‌ನಲ್ಲಿ ಆಗಸ್ಟ್ 17, 2024ರಂದು ವಿಜೃಂಭಣೆಯಿಂದ ನೆರವೇರಿತು. ನೆರೆಹೊರೆಯ ರಾಜ್ಯಗಳಾದ ಇಲಿನಾಯ್ಸ್, ಇಂಡಿಯಾನಾ ಮತ್ತು ಮಿಚಿಗನ್‌ನ ಸುಮಾರು 30ಕ್ಕೂ ಹೆಚ್ಚು ಬಂಧುಗಳು ಆಗಮಿಸಿದರು. ಕಳೆದೆರಡು ವರುಷಗಳಿಂದ ಡಾ। ಉಷಾ ಕೋಲ್ಪೆ ಅವರ ಸ್ವಗೃಹದಲ್ಲಿ ಊಟ–ಉಪಚಾರ, ಕಿರಿಯ ಮತ್ತು ಹಿರಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯುತ್ತಿತ್ತು. ಈ ವರುಷದ ವಿಶೇಷವೇನೆಂದರೆ ವನಭೋಜನ ಮತ್ತು ಆಟೋಟಗಳು. ಸುಮಾರು ಬೆಳಗ್ಗೆ 11–00 ಗಂಟೆಗೆ ಎಲ್ಲರೂ ಬಂದು ಸೇರಿದರು. ಕ್ರಿಕೆಟ್, ವಾಲಿಬಾಲ್, ಓಟ, ಕುಣಿತಗಳೊಂದಿಗೆ ದಿನ ಪ್ರಾರಂಭವಾಯಿತು. ಬಂಧನಗಳನ್ನು ಹೆಚ್ಚಿಸಲು ಸಂಬಂಧಗಳ ಬಗ್ಗೆ ವಿಷಯ ವಿನಿಮಯವಾಯಿತು. ಎಲ್ಲರೂ ಒಂದಲ್ಲ ಒಂದು ರೀತಿ ಸಂಬಂಧ ಇದ್ದೇ ಇರುತ್ತದೆ ಎಂದು ತಿಳಿದು ತೃಪ್ತಿ, ಸಮಾಧಾನವಾಯಿತು. ಉಭಯ ಕುಶಲೋಪರಿ ಸಾಂಗವಾಗಿ ನಡೆಯಿತು. ಮೃಷ್ಟಾನ್ನ ಭೋಜನವಿದ್ದರೆ ಎಲ್ಲವು ಚೆನ್ನಾಗಿ ನಡೆಯಿತು ಎಂದರ್ಥ. ಆಯೋಜಕರಾದ ಮಿಚಿಗನ್ ಸ್ಥಾನಿಕರು ಅತ್ಯದ್ಭುತ ಹಲವು ಶುಚಿ–ರುಚಿಯಾದ ತಿಂಡಿತಿನಿಸು, ಭಕ್ಷಭೋಜ್ಯ, ಖಾದ್ಯಗಳನ್ನು ತಯಾರಿಸಿದ್ದರು. ಅನ್ನ, ಸಾರು, ಪಲ್ಯ, ಚಟ್ನಿ, ಪುಳಿಕಜಿಪು, ಪಚ್ಚೋಡಿ, ಮೊಸರನ್ನ, ಪುಲಾವು, ಮೊಸರು, ಪಾಯಸ ಹತ್ತು ಹಲವು ಬಗೆಯ ಅಡುಗೆಗಳು ಇದ್ದವು. ಎಲ್ಲವು ಅತ್ಯದ್ಭುತ, ಹೊಟ್ಟೆ ತುಂಬಿದರೂ ಇನ್ನಷ್ಟು ತಿನ್ನಬೇಕೆನಿಸುತ್ತಿತ್ತು. ವಿಶೇಷವೇನೆಂದರೆ ಊರ ಹೋಳಿಗೆ. ವಾಣಿಯವರ ಸ್ನೇಹಿತರೊಬ್ಬರು ತಂದುಕೊಟ್ಟಿದ್ದನ್ನು ಅವರು ಅದನ್ನು ನಮಗೆಲ್ಲಾ ಹಂಚಿದುದು... ತದನಂತರ ಎಲ್ಲರೂ ಸೇರಿ ಆಟ ಆಡಿದುದು. ಪ್ರತಿ ಬಾರಿಯಂತೆ ಸ್ಥಾನಿಕರ ವಿಚಾರದ ಬಗ್ಗೆ ಕೆಲವು ಮಾತುಗಳು ಡಾ। ನಾಗಭೂಷಣ್ ಮೂಲ್ಕಿಯವರಿಂದ ತುಳು ಬ್ರಾಹ್ಮಣ ಸಾರಾಂಶ : ಕ್ರಿಸ್ತಪೂರ್ವ 3200ರಲ್ಲಿ ತುಳು ಬ್ರಾಹ್ಮಣ ನಮ್ಮ ಪೂರ್ವಜರಾದ ದಿವಾಕರ ಮುನಿ (ಸ್ಥಾನಿಕ) ತಿರುವನಂತಪುರ ಶ್ರೀ ಅನಂತ ಪದ್ಮನಾಭ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಕಲರಿ ಪಯಟ್ಟು ಕಲಿಸಲು ತುಳು ಬ್ರಾಹ್ಮಣರು ಕೇರಳಕ್ಕೆ ಹೋಗುತ್ತಿದ್ದರು. ಕಲರಿಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಈಗದ ದಕ್ಷಿಣ ಕನ್ನಡಕ್ಕೆ ಬರುತ್ತಿದ್ದರು. 15 ಶತಮಾನದಲ್ಲಿ ವಲಸೆ ಬಂದ ಬ್ರಾಹ್ಮಣರು ಸ್ಥಳೀಯ ತುಳುಬ್ರಾಹ್ಮಣರನ್ನು ಸ್ಥಾನಿಕರು ಎಂದು ಸಂಬೋಧಿಸಲು ಪ್ರಾರಂಭ ಮಾಡಿದರು. ಆ ಕಾಲದಲ್ಲಿ ಸ್ಥಾನಿಕರಿಗೆ ಅಗ್ರಪಂಕ್ತಿ ಇತ್ತು. ಡಾ। ಉಷಾ ಕೋಲ್ಪೆಯವರು ನಾಗಭೂಷಣ ರಚಿತ ಸಂಸ್ಕೃತ ತ್ರಿಶೂಲಿನಿ ಸ್ತೋತ್ರವನ್ನು ಪಠಿಸಿದರು. ಶ್ರೀ ಹರೀಶ್ ಅವರು ವಂದನಾರ್ಪಣೆ ಮಾಡಿದರು. ಇಲ್ಲಿಗೆ ಮುಗಿಯಲಿಲ್ಲ. ಭಾರತದ ಸ್ವಾತಂತ್ರ್ಯ ಉತ್ಸವದ ಪ್ರಯುಕ್ತ ನಡೆಯುತಿದ್ದ ಕಾರ್ಯಕ್ರಮ ವೀಕ್ಷಿಸಿ, ವ್ಯಾಪಾರ, ವ್ಯವಹಾರಗಳನ್ನೂ ಮಾಡಿದೆವು. ಶ್ರೀ ಶೃಂಗೇರಿ ಮಠದ ದೇವಸ್ಥಾನಕ್ಕೆ ಭೇಟಿ ಕೊಟ್ಟು ಶಾರದಾಂಬೆಯ ಆಶೀರ್ವಾದ ಪಡೆದೆವು. ಪುನಃ ಶ್ರೀಮತಿ ವಾಣಿ ಹರೀಶ್ ಮನೆಯಲ್ಲಿ ರಾತ್ರಿ ಭೋಜನ ಮತ್ತು ಹರಟೆ. ಮರುದಿನ ಪರ ರಾಜ್ಯಗಳಿಂದ ಬಂದವರು ವಾಪಸ್ಸು. ಇದೊಂದು ಚಿರಸ್ಮರಣೀಯ ಸಮಾವೇಶ. ಸಮಾವೇಶದ ಸಂಘಟನೆ ಮತ್ತು ನಿರ್ವಹಣೆಯನ್ನು ಶ್ರೀಮತಿ ವಾಣಿ ಹರೀಶ್ ಅವರು ಮಿಚಿಗನ್ ಸಹಯೋಗಿಗಳೊಂದಿಗೆ ಅಚ್ಚುಕಟ್ಟಾಗಿ ನಿರ್ವಹಿಸಿದರು. ಅವರಿಗೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ. ಪಡುಬಿದ್ರೆಯ ಪ್ರಖ್ಯಾತ ನೇತ್ರತಜ್ಞ ಡಾ। ಲಕ್ಷ್ಮೀನಾರಾಯಣ ಅವರು ತಮ್ಮ ಪತ್ನಿಯೊಂದಿಗೆ ಈ ಸಮಾವೇಶದಲ್ಲಿ ಪಾಲ್ಗೊಂಡದ್ದು ನಮಗೆಲ್ಲರಿಗೂ ಸಂತಸವಾಯಿತು. ಕಳೆದ ವರುಷ ಸ್ಥಾನಿಕ ಸಮಾಜದ ಅಗ್ರಗಣ್ಯರಾದ ಸತತವಾಗಿ ಸಮಾಜದ ಏಳ್ಗೆಗಾಗಿ ದುಡಿದ / ದುಡಿಯುತ್ತಿರುವ ಹಿರಿಯರಾದ ಅಜ್ಜಾವರ ಶ್ರೀ ಶಿವರಾವ್ ತಮ್ಮ ಪತ್ನಿಯೊಂದಿಗೆ ಭಾಗವಹಿಸಿದ್ದರು. ಅವರ ಅವಿರತ ಸೇವೆಗಾಗಿ ಅವರನ್ನು ಸನ್ಮಾನಿಸಿದೆವು.

# 'ಹಬ್ಬಗಳ ಮಹೋತ್ಸವದ ಸಂಭ್ರಮಾಚರಣೆ'



ತಾ. 16–09–2024ರಂದು 'ಹಬ್ಬಗಳ ಮಹೋತ್ಸವದ ಸಂಭ್ರಮಾಚರಣೆ'ಯ ಸಲುವಾಗಿ ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್ (ರಿ.), ಈ ಸಂಸ್ಥೆಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹಾಗೂ ಅತಿಥಿ ಕಲಾವಿದರಿಂದ ಸಂಗೀತ, ನೃತ್ಯ ಕಾರ್ಯಕ್ರಮವು ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಕುಡ್ಪಿ ಪದ್ಮನಾಭಯ್ಯ ಗಾರ್ಡನ್, ಬಿಜೈ ರಸ್ತೆ, ಮಂಗಳೂರು ಇಲ್ಲಿ ನಡೆಯಿತು. ಸಂಸ್ಥೆಯ ಗುರುಗಳಾದ 'ನಾಟ್ಯವಿಶಾರದ', 'ಗುರುಕುಲ ಭೂಷಣ' ವಿದ್ವಾನ್ ಶ್ರೀ ಯು. ಕೆ. ಪ್ರವೀಣ್ ಮತ್ತು ವಿದುಷಿ ಉಷಾ ಪ್ರವೀಣ್ ಇವರ ಸುಮಾರು 100 ಶಿಷ್ಯವೃಂದದವರು ರಾಷ್ಟ್ರಭಕ್ತಿ ಗೀತೆ, ಭಾವಗೀತೆ, ಜನಪದಗೀತೆ ಹಾಗೂ ಸ್ವಾತಂತ್ರ್ಯೋತ್ಸವವನ್ನು ಬಿಂಬಿಸುವ ಹಾಡುಗಳನ್ನು ಮಧುರವಾಗಿ ಹಾಡಿದರು. ಗಣೇಶೋತ್ಸವ, ವರಮಹಾಲಕ್ಷ್ಮೀ ವ್ರತ, ಶ್ರೀಕೃಷ್ಣ ಜನ್ಮಾಷ್ಟಮಿ ಮುಂತಾದ ಹಬ್ಬಗಳನ್ನು ವೈಭವೀಕರಿಸುವ ಭರತನಾಟ್ಯವನ್ನು ಅತ್ಯಂತ ಸುಂದರವಾಗಿ ಪ್ರದರ್ಶಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಇವರ ಪ್ರಾಯೋಜಕತ್ವದಲ್ಲಿ ಈ ಸಂಗೀತ ಹಾಗೂ ಭರತನಾಟ್ಯ ಕಾರ್ಯಕ್ರಮವು ನಡೆಯಿತು. ಈ ಕಾರ್ಯಕ್ರಮದಲ್ಲಿ ನಿವೃತ್ತ ಸೈನ್ಯಾಧಿಕಾರಿ ಮತ್ತು ರಾಮಕೃಷ್ಣ ಮಠ, ಮಂಗಳೂರು ಇದರ ಟ್ರಸ್ಟ್‌ನ ಸದಸ್ಯರಾದ ಬೆಲ್ಲಾಳ ಶ್ರೀ ಗೋಪಿನಾಥ ರಾವ್ (ನಿವೃತ್ತ ಸೈನ್ಯಾಧಿಕಾರಿ) ಇವರನ್ನು ಸನ್ಮಾನಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು, ಇದರ ಅಧ್ಯಕ್ಷರಾದ ಹರ್ಷಕುಮಾರ್ ಕೇದಿಗೆ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ವಿದ್ವಾನ್ ಯು. ಕೆ. ಪ್ರವೀಣ್ ಅವರು ಆಗಮಿಸಿದ ಅತಿಥಿಗಳನ್ನು ಸ್ವಾಗತಿಸಿದರು. ಕದ್ರಿ ಸಂಗೀತ ವಿದ್ಯಾನಿಲಯದ ಗುರುಗಳಾದ ವಿದುಷಿ ಉಷಾ ಪ್ರವೀಣ್ ಅವರು ಧನ್ಯವಾದವನ್ನು ಅರ್ಪಿಸಿದರು. ಡಾ। ವಿಜಯಲಕ್ಷ್ಮೀ ನಾಯಕ್ ಕಾರ್ಯಕ್ರಮವನ್ನು ನಿರೂಪಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ



ಶ್ರೀ ಸುಬ್ರಹ್ಮಣ್ಯ ಸದನದ ಮಹಿಳಾ ವೇದಿಕೆಯ ಉಪಾಧ್ಯಕ್ಷೆ ಡಾ। ಜಯಲಕ್ಷ್ಮೀ ತಮ್ಮ ಮಾತಾಪಿತರಾದ ಶ್ರೀ ಮುರಾರಿ ರಾವ್ ಹಾಗೂ ಶ್ರೀಮತಿ ಸರಸ್ವತಿ ರಾವ್ ಇವರ ಹೆಸರಿನಲ್ಲಿ ರೂ. 15,000/–ವನ್ನು ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾರ್ಥಿವೇತನ ನಿಧಿಗೆ ನೀಡಿರುತ್ತಾರೆ. ಅವರು ಈ ಮೊದಲು ರೂ. 15,000/–ವನ್ನು ನೀಡಿದ್ದು ಒಟ್ಟು ರೂ. 30,000/– ನೀಡಿದಂತಾಗಿದೆ. ಸದನದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಸ್ವೀಕರಿಸಿದರು. ಮುಂದೆ ಈ ನಿಧಿಯನ್ನು ಇನ್ನೂ ಹೆಚ್ಚಿಸುವ ಭರವಸೆ ನೀಡಿರುತ್ತಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ವಂದನೆಗಳು. ಶ್ರೀ ಸುಬ್ರಹ್ಮಣ್ಯ ಸಭಾದಿಂದ 2023–2024ನೇ ಅವಧಿಯಲ್ಲಿ 139 ವಿದ್ಯಾರ್ಥಿಗಳಿಗೆ ಒಟ್ಟು ರೂ. 1,11,44,000/– (ಒಂದು ಕೋಟಿ ಹನ್ನೊಂದು ಲಕ್ಷದ ನಲ್ವತ್ತನಾಲ್ಕು ಸಾವಿರ) ವಿದ್ಯಾರ್ಥಿ ವೇತನ ಮತ್ತು ಸಾಲ ವಿದ್ಯಾರ್ಥಿ ವೇತನ ನೀಡಲಾಗಿದೆ. ಇದನ್ನು ಪಡೆದ ಹಲವು ವಿಧ್ಯಾರ್ಥಿಗಳು, ಅವರ ಹೆತ್ತವರು, ಸಹೃದಯಿ ದಾನಿಗಳು ತಮ್ಮ ಹಿರಿಯರ ಸ್ಮರಣಾರ್ಥ ವಿದ್ಯಾರ್ಥಿನಿಧಿಗಳನ್ನು ಸ್ಥಾಪಿಸಿದ್ದಾರೆ. ನಾವು ಪ್ರತಿವರ್ಷ ನಿಗದಿತ ಮೊತ್ತವನ್ನು ಹೆಚ್ಚಿಸುತ್ತಿದ್ದು, ಇನ್ನಷ್ಟು ವಿದ್ಯಾರ್ಥಿನಿಧಿಗಳನ್ನು ದಾನಿಗಳು ಸ್ಥಾಪಿಸಲು ವಿನಂತಿಸುತ್ತೇವೆ. ಆದಾಯ ತೆರಿಗೆ ವಿನಾಯತಿ ಲಭ್ಯವಿರುತ್ತದೆ.

***ಹೆಚ್ಚಿನ ಮಾಹಿತಿ : ಶ್ರೀ ಕರುಣ್ ರಾವ್ ಬೆಳ್ಳೆ – 7337634359*** ಮತ್ತು ***ಶ್ರೀ ಪಿ. ಶ್ರೀಕಾಂತ್ ರಾವ್ – 7795116598***

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

## ‘ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ’



ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಅವರು ಕಂಪ್ಯೂಟರ್ ಕಲಿಯುವ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಮೂಲನಿಧಿಯಾಗಿ ರೂ. 1,10,000/– (ರೂಪ್ಯಾ ಒಂದು ಲಕ್ಷದ ಹತ್ತು ಸಾವಿರ) ದೇಣಿಗೆ ನೀಡಿ ‘ಕಂಪ್ಯೂಟರ್ ಶಿಕ್ಷಣ ವಿದ್ಯಾನಿಧಿ’ಯನ್ನು ಸ್ಥಾಪಿಸಿದ್ದಾರೆ. ಈ ನಿಧಿಯ ಮೊತ್ತವನ್ನು ಆಸಕ್ತ ಸಮಾಜ ಬಾಂಧವರ ದೇಣಿಗೆಯಿಂದ ಕನಿಷ್ಠ ರೂಪಾಯಿ 10 ಲಕ್ಷಕ್ಕೆ (ಹತ್ತು ಲಕ್ಷ)ಕ್ಕೆ ಹೆಚ್ಚಿಸುವ ಉದ್ದೇಶವಿದ್ದು ಇಂತಹ ಸಮಾಜಮುಖಿ ಕಾರ್ಯಕ್ಕೆ ಡಾ। ಜಯಲಕ್ಷ್ಮೀಯವರು ರೂ. 10,000/– (ಹತ್ತು ಸಾವಿರ) ದೇಣಿಗೆ ನೀಡಿದ್ದಾರೆ. ಬಾಕಿ ಉಳಿದ ಮೊತ್ತ ರೂ. 8.80 ಲಕ್ಷ (ಎಂಟು ಲಕ್ಷದ ಎಂಬತ್ತು ಸಾವಿರ). ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಕೃತಜ್ಞತೆಗಳು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

## ಪುತ್ತೂರಿನ ‘ಶಿವಸದನ’ ಹಿರಿಯನಾಗರಿಕರ ವಸತಿನಿಲಯಕ್ಕೆ ದೇಣಿಗೆ



ಬೆಂಗಳೂರು ನಿವಾಸಿ, ನಿವೃತ್ತ SBI ಅಧಿಕಾರಿ ಬಪ್ಪನಾಡು ಶ್ರೀ ಸೋಮಶೇಖರ್ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ರಾವ್ ಸ್ಮರಣಾರ್ಥ ಅವರ ಮಗಳು ಶ್ರೀಮತಿ ದಯಾ ಸತೀಶ್ ರಾವ್ ಮತ್ತು ಅಳಿಯ ಶ್ರೀ ಸತೀಶ್ ರಾವ್ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿನಿಲಯ ‘ಶಿವಸದನ’ಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಈ ಹಿಂದೆ ಅವರು ರೂ. 50,000/– ನೀಡಿದ್ದು, ಒಟ್ಟು ರೂ. 60,000/– ನೀಡಿದಂತಾಗಿದೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ‘ಶಿವಸದನ’ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯದ ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಪುತ್ತೂರಿನ ಆಸುಪಾಸಿನ ಮಕ್ಕಳ ದಾಖಲಾತಿ ತಾ. 1–6–2024ರಿಂದ ಆರಂಭವಾಗಿದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ. ಮಿತ ದರದಲ್ಲಿ ಸುಸಜ್ಜಿತ ಶಾಲೆಯಲ್ಲಿ ಪರಿಣಿತರಿಂದ ಸೇವೆ, ಆರೈಕೆ, ಆಟ–ಪಾಠವನ್ನು ಒದಗಿಸಲಾಗುವುದು. ಆವಶ್ಯಕತೆ ಇರುವವರು ಮಾಹಿತಿ ಪಡೆಯಲು ವಿನಂತಿ. ನಿವಾಸಿ ಸೌಲಭ್ಯವೂ ಲಭ್ಯವಿದೆ. **ಹೆಚ್ಚಿನ ಮಾಹಿತಿ : ಶ್ರೀ ಕರುಣ್ ರಾವ್ ಬೆಳ್ಳೆ ✆ : 737634359; ಶ್ರೀಮತಿ ಸುಮಂಗಲಾ ಪ್ರಭಾಕರ್ ✆ : 9844242442; ಶ್ರೀ ಪಿ. ಶ್ರೀಕಾಂತ್ ರಾವ್ ✆ : 7795116598**




ಉಪ್ಪಿನಂಗಡಿ ನಿವಾಸಿ ಶ್ರೀ ಎ. ಜೆ. ರಾವ್ ಮತ್ತು ಶ್ರೀಮತಿ ವತ್ಸಲಾ ರಾವ್ ದಂಪತಿಗಳು ತಮ್ಮ ಸಹಸ್ರಚಂದ್ರ ದರ್ಶನ ಶಾಂತಿ ಸಮಾರಂಭವನ್ನು ಮಠಂತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಏರ್ಪಡಿಸಿದ್ದರು. ಆ ಸುಸಂದರ್ಭದಲ್ಲಿ ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲ ಚೇತನರ ವಸತಿನಿಲಯ ‘ಶಿವಸದನ’ಕ್ಕೆ ರೂ. 20,000/– ದೇಣಿಗೆ ನೀಡಿರುವರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರು ಸ್ವೀಕರಿಸಿದರು.

## ಹೊಸಬಾಳಿನ ಹೊಸಿಲಲಿ ನಿಂತಿರುವ



ಬೊಕ್ಕಸ ನಂದಾವರದ ಶ್ರೀ ಅಣ್ಣಪ್ಪಯ್ಯ ಮತ್ತು ಶ್ರೀಮತಿ ಸುಮಿತ್ರಾ ಇವರ ಸುಪುತ್ರ **ಚಿ। ಶಿವಕುಮಾರ್ ಎನ್. ಬಿ.** ಇವರ ವಿವಾಹ ಮಹೋತ್ಸವವು ಶ್ರೀಮತಿ ವೇದಾವತಿ ಮತ್ತು ಕೀರ್ತಿಶೇಷ ವಿಠಲ ರಾಯರ ಸುಪುತ್ರಿ **ಚಿ। ಸೌ। ಅಂಕಿತಾ ಕೆ. ಕಿಲ್ಲೂರು** ಇವರೊಂದಿಗೆ ಬೆಳ್ತಂಗಡಿ ಲಾಯಿಲ ‘ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾಭವನ’ದಲ್ಲಿ ತಾ. 8–09–2024ನೇ ಭಾನುವಾರದಂದು ನೆರವೇರಿತು.

❖ ❖ ❖ ❖

ದಿ। ಶುಂಠಿಪಾಡಿ ಸುರೇಶ್ ಕುಮಾರ್ ಮತ್ತು ಶ್ರೀಮತಿ ಸುಜಾತ ಇವರ ಪುತ್ರ **ಚಿ। ಸಂಜಿತ ವಿಷ್ಣು** ಹಾಗೂ ಶ್ರೀ ಗುರುರಾಜ್ ರಾವ್ ಮತ್ತು ದಿ। ಅಶ್ವಿನಿ ಇವರ ಪುತ್ರಿ **ಚಿ। ಸೌ। ಆಶ್ರಿತಾ** ಇವರ ವಿವಾಹವು ತಾ. 15–9–2024ನೇ ರವಿವಾರ ಕಳಸದ ‘ಜಿ.ಎಸ್.ಬಿ. ಭವನ’ದಲ್ಲಿ ನಡೆಯಿತು.

ಪತ್ರಿಕೆಗೆ ಶುಭ ಬಯಸುವ–



**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
‘ಶರ್ಮ’, ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Sri Hari Adyapady*
*Proprietor*
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*



ಓಂ

॥ ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಪ್ರಸನ್ನಾ ॥

**ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನ ಮತ್ತು**
**ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ**
**ಬಳ್ಪ, ದಕ್ಷಿಣ ಕನ್ನಡ**

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ
ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ
ಶ್ರೀಮದ್ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ
ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

**ಸ್ವಸ್ತಿ। ಶ್ರೀ ಕ್ರೋಧಿ ಸಂವತ್ಸರದ ಆಶ್ವಯುಜ ಶುಕ್ಲಪಕ್ಷ ೧**
**ದಿನಾಂಕ 03-10-2024ನೇ ಗುರುವಾರದಿಂದ**
**ದಿನಾಂಕ 12-10-2024ನೇ ಶನಿವಾರ ಪರ್ಯಂತ**
**ಶ್ರೀ ಕ್ಷೇತ್ರದ ತಂತ್ರಿಗಳಾದ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

## ಮಹಾನವರಾತ್ರಿ ಉತ್ಸವಗಳು

**ಜರಗಲಿರುವುದು. ಆ ಪ್ರಯುಕ್ತ ತಾವೆಲ್ಲರೂ ಬಂದು ಈ ಸತ್ಕಾರ್ಯಗಳಲ್ಲಿ ಭಾಗವಹಿಸಿ ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.**

PREETHIKA AUTOMOBILES
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
☏ 2493633
9845851573
Dealers in :
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ದೃತಿ ಮತ್ತು ಧ್ರುವ್

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003





PRAMOD AUTOMOBILES
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ನಮ್ಮ ಸಮಾಜದ ಯಾವುದೇ ಶುಭ-ಶೋಭನಾದಿ ಕಾರ್ಯಕ್ರಮಗಳಲ್ಲಿ ಅತ್ಯಂತ ಉತ್ಸಾಹದಿಂದ ಸ್ವಯಂಪ್ರೇರಿತರಾಗಿ ಸಹಕರಿಸುತ್ತಿದ್ದ **ಟಿ. ರಾಮಪ್ಪಯ್ಯ** ಅವರು ತಾ. 28-09-2024ನೇ ಶನಿವಾರ ವಿಧಿವಶರಾಗಿರುತ್ತಾರೆ.

ಮಂಗಳೂರಿನಲ್ಲಿ ವಾಸವಾಗಿದ್ದ ಇವರು ತಮ್ಮ ನಗುಮುಖ ಹಾಗೂ ಹಾಸ್ಯಪ್ರವೃತ್ತಿಯಿಂದ ಎಲ್ಲ ಸಮಾಜ ಬಾಂಧವರಿಗೆ ಆತ್ಮೀಯರಾಗಿದ್ದರು. ಪತ್ನಿ ಶ್ರೀಮತಿ ರಮಾ, ಮಗಳು ಶ್ರೀಮತಿ ರಶ್ಮಿ, ಗಂಡುಮಕ್ಕಳು ಶ್ರೀ ರಾಜೇಶ್ ಮತ್ತು ಶ್ರೀ ರಂಜಿತ್ ಹಾಗೂ ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಸಭಾದ ಸಕ್ರಿಯ ಸದಸ್ಯರಾದ ಮಾವ ಸಿ. ಆರ್. ಸುಬ್ರಹ್ಮಣ್ಯ ಅಲ್ಲದೆ ಅಪಾರ ಬಂಧು-ಮಿತ್ರರನ್ನು ಹಾಗೂ ಅಭಿಮಾನಿಗಳನ್ನು ಇವರು ಅಗಲಿದ್ದಾರೆ.

***ಜ್ಞಾನಶಕ್ತಿ ಪತ್ರಿಕೆಯು ಅಗಲಿದ ಆತ್ಮಕ್ಕೆ ಶ್ರದ್ಧಾಂಜಲಿ ಬಯಸುತ್ತಿದೆ.***

***



**ಶ್ರೀಮತಿ ವತ್ಸಲಾ ಕುಮಾರಿ** (59) ತಾರೀಕು 19-9-2024ನೇ ಗುರುವಾರ ಹೆಜಮಾಡಿಯಲ್ಲಿ ನಿಧನ ಹೊಂದಿದರು. ಅವರು ಪತಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಇವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದು, ಇತ್ತೀಚೆಗೆ ಕರ್ನಾಟಕ ಸಚಿವಾಲಯದ ಹಣಕಾಸು ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಪದೋನ್ನತಿ ಹೊಂದಿದ್ದರು.

***




ದಿ। ರಾಘವ ಭಾಗವತರವರ ಧರ್ಮಪತ್ನಿ **ಶ್ರೀಮತಿ ಶಾಂಭವಿ** (92) ತಾ. 12-9-2024ನೇ ಗುರುವಾರ ಮಂಗಳೂರಿನ ಕುಳಾಯಿಯಲ್ಲಿ ನಿಧನಹೊಂದಿದರು. ಇವರು ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

***



ದಿ। ಉಬರಳೆ ಕೃಷ್ಣಯ್ಯರವರ ಧರ್ಮಪತ್ನಿ **ಶ್ರೀಮತಿ ಶಾರದಾ** (84) ತಾ. 23-9-2024ನೇ ಸೋಮವಾರ ನಿಧನ ಹೊಂದಿದರು. ಅವರು ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

***




ಬೆಳ್ತಂಗಡಿಯಲ್ಲಿ ಹಲವು ವರ್ಷಗಳಿಂದ ಫೋಟೋಗ್ರಾಫರ್ ಆಗಿ 'ಶಾಂತಲಾ ಸ್ಟುಡಿಯೋ'ದವರು ಎಂದೇ ಪ್ರಖ್ಯಾತರಾಗಿರುವ **ಶ್ರೀ ಅನಾರು ಶಶಿಧರ್ ರಾವ್** (80) ಉಡುಪಿಯ ಮಗಳ ಮನೆಯಲ್ಲಿ ತಾರೀಕು 23-09-2024ನೇ ಸೋಮವಾರ ನಿಧನರಾದರು. ಇವರು ಪತ್ನಿ, ಮೂರು ಪುತ್ರಿಯರು, ಓರ್ವ ಪುತ್ರನನ್ನು ಅಗಲಿದ್ದಾರೆ.

ರಾಮಾ ಆಟೋಮೊಬೈಲ್ಸ್


ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ರೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Muralidhara Rao Adyapadi
Proprietor
Mob : 94480 27259
99803 16434

SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

# ಶ್ರೀ ಸುಬ್ರಹ್ಮಣ್ಯ ಸಭಾದಿಂದ ಶೃಂಗೇರಿ ಯಾತ್ರೆ



ಶೃಂಗೇರಿ ಜಗದ್ಗುರುಗಳ ಚಾತುರ್ಮಾಸ ಪ್ರಯುಕ್ತ
**ಮಂಗಳೂರು ಶ್ರೀ ಸುಬ್ರಹ್ಮಣ್ಯ ಸಭಾದ**
ಸುಮಾರು 80ಕ್ಕೂ ಹೆಚ್ಚು ಸಮಾಜ ಬಾಂಧವರು
ಶೃಂಗೇರಿಗೆ ತೆರಳಿ ಗುರುಗಳ ಕೃಪೆಗೆ ಪಾತ್ರರಾದರು.

ಚಿತ್ರ : ಶ್ರೀ ರಘುವೀರ್ ಪೆರ್ಡೂರ್


Land Trades®
BUILDERS & DEVELOPERS
SINCE 1992

**Take your business to the next level**
*with our commercial spaces at best locations.*



Land Trades
VIKRAM
TRADE CENTER
PVS ROAD, KODIALBAIL

SYNERGY
Airport Road, Yeyyadi



8882 777 444
98807 42159 | 98450 84866 | 96115 31026
sales@landtrades.in I www.landtrades.in

Office :
Milestone25", 5th Floor,
Collectors Gate Junction,
Balmatta,
Mangalore, 575001

CRISIL Real Estate DA2 Developer Gradings
CREDAI MANGALORE
ISO 9001:2015


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher : Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*